ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಅಧ್ಯಕ್ಷರೆ, what was the message you have received ?

ಅಧ್ಯಕ್ಷರು :– ಈಗಾಗಲೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಗೃಹ ಸಚಿವರು ಉತ್ತರ ಕೊಟ್ಟಿದ್ದಾರೆ. ಇಲ್ಲಿಗೆ ಈ ಚರ್ಚೆಯನ್ನು ಮುಗಿಸೋಣ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ :– ನಮಗೆ ಸರ್ಕಾರದ ಕಡೆಯಿಂದ ಸ್ಪಷ್ಟವಾದ ಉತ್ತರ ಬಂದಿಲ್ಲ. ಅದಕ್ಕಾಗಿ ನಾವು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :– ಈಗ ಪ್ರಕಟಣೆ.

ಪ್ರಕಟಣೆ

ಮಾನ್ಯ ಸದಸ್ಯರ ಗೌರವಾರ್ಥ ಮಧ್ಯಾಹ್ನ ಮಾನ್ಯ ಅಶೋಕ್‌ರವರು ಹಾಗೂ ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರು ಭೋಜನ ಕೂಟವನ್ನು ಏರ್ಪಡಿಸಿದ್ದಾರೆ. ದಯವಿಟ್ಟು ಎಲ್ಲ ಮಾನ್ಯ ಸದಸ್ಯರು ಬರಬೇಕು.

ಈಗ ಸದನವನ್ನು ಸಂಜೆ 4.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 2.48 ಗಂಟೆಗೆ ಮುಕ್ತಾಯಗೊಂಡು ಮತ್ತೆ ಸಂಜೆ 4.00 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 4 ಗಂಟೆ 14 ನಿಮಿಷಕ್ಕೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಸಿದ್ದರಾಮಯ್ಯ : ಬೆಲ್ ಹೊಡೆಯುವುದು ಸರಿಯಾಗಿ ಕೇಳಿಸುತ್ತಿಲ್ಲ. ಕೆಂಗಲ್ ಹನುಮಂತಯ್ಯರ ಕಾಲದಲ್ಲಿ ಅದನ್ನು ಹಾಕಿದ್ದಾರೆಂದು ಕಾಣಿಸುತ್ತದೆ. ಅದನ್ನು ಬದಲಾಯಿಸುವುದಿಲ್ಲವೇ ?

ಅಧ್ಯಕ್ಷರು :– ಇಂಪಾಗಿ ಕೇಳಿಸುವಂತೆ ಅದಕ್ಕೆ ಬೇರೆ ಏನಾದರೂ ವ್ಯವಸ್ಥೆ ಮಾಡೋಣ. ಈಗ ಆಯವ್ಯಯದ ಮೇಲೆ ಚರ್ಚೆಯನ್ನು ಮುಂದುವರೆಸೋಣ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ :– ಮಾನ್ಯ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳುವುದಿಲ್ಲವೆ ?